೨.	ಮೈಸೂರು	14(4)	2(1)	Ë	3(1)	1	5(2)
13.	ಬೆಳಗಾಂ	10(3)	2	-	3(1)	1(1)	5(1)
14.	ಬಿಜಾಪುರ	11(4)	2(1)	-	3(1)	1	5(2)
15.	ಧಾರವಾಡ	17(3)	2(1)	-	5(1)	1	9(3)
16.	ಉತ್ತರ ಕನ್ನಡ	14(1)	1	-	4(2)	-	6(2)
17.	ಬಳ್ಳಾರಿ	1	1(1)	2	1(1)	8(1)	-
18.	ಬೀದರ್	5(1)	1	1	1	-	2(1)
19.	ಗುಲ್ಬರ್ಗ	10()	2(1)	1	2(1)	1	4(1)
20.	ರಾಯಚೂರು	9(3)	2(4)	1	2	-	4(2)
		175(59)	82(1)	9(4)	46(1)	12(4)	76(26)

ಟಿಪ್ಪಣಿ : ಆವರಣದಲ್ಲಿರುವ ಅಂಕಿಗಳು ಮಹಿಳೆಯರಿಗೆ ಮೀಸಲಿರಿಸಿರುವ ಹುದ್ದೆಗಳನ್ನು ಸೂಚಿಸುತ್ತವೆ.

ಬೀದರ್‌ನಲ್ಲಿ ಡೈರಿ ಪ್ರಾರಂಭಿಸುವ ಕಾರ್ಯದ ಪ್ರಗತಿ

308-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್‌ನಲ್ಲಿ ಹಾಲಿನ ಡೈರಿಯನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದವರು ತೀರ್ಮಾನವನ್ನು ಯಾವಾಗ ತೆಗೆದು ಕೊಂಡಿದ್ದಾರೆ.

ಆ) ಇಲ್ಲಿಯವರೆಗೂ ಈ ವಿಷಯದಲ್ಲಿ ಯಾವ ಪ್ರಗತಿಯನ್ನು ಸಾಧಿಸಲಾಗಿದೆ. ಹಾಗೂ ಡೈರಿಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಇ) ಡೈರಿ ಪ್ರಾರಂಭಕ್ಕಾಗಿ ಎನ್.ಡಿ.ಡಿ.ಬಿ.ಯಿಂದ ಸರ್ಕಾರದವರು ನೆರವನ್ನು ಕೇಳಿದ್ದಾರೆಯೇ.

ಈ) ಡೈರಿ ನಿರ್ಮಾಣಕ್ಕಾಗಿ ಎಷ್ಟು ಎಕರೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ದಿನಾಂಕ : 23-5-1992

ಆ) ಶೇಕಡ 80ರಷ್ಟು ಸಿವಿಲ್ ಕಾಮಗಾರಿಗಳು ಮುಗಿದಿವೆ. ಅಗತ್ಯವಾದ ಯಂತ್ರೋಪಕರಣಗಳನ್ನು ಖರೀದಿಸಲು ಕ್ರಮ ಜರುಗಿಸುತ್ತಿದ್ದು ಜೂನ್ 1996ರ ಅಂತ್ಯಕ್ಕೆ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಇ) ಇಲ್ಲ

ಈ) 13.19 ಎಕರೆ

ರಾಜ್ಯದ ಪ್ರವಾಸೋದ್ಯಮದ ಯೋಜನೆಗಳಿಗೆ ಕೇಂದ್ರದ ಮಂಜೂರಾತಿ

309 - ಶ್ರೀ ಗುರುಪಾದಪ್ಪ ನಾಗಮಾರವಳ್ಳಿ (ಔರಾದ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗಿರುವ ರಾಜ್ಯ ಪ್ರವಾಸೋದ್ಯಮ ಯೋಜನೆಗಳಾವುವು? (ವಿವರಗಳನ್ನು ಒದಗಿಸುವುದು)

ಆ) ಈ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಎಂದು ಕಳುಹಿಸಲಾಯಿತು ಹಾಗೂ ಅವುಗಳ ಪೈಕಿ ಎಷ್ಟಕ್ಕೆ ಕೇಂದ್ರ ಸರ್ಕಾರ ಮಂಜೂರಾತಿಯನ್ನು ನೀಡಿದೆ.

ಇ) ಬಾಕಿ ಉಳಿದಿರುವ ಯೋಜನೆಗಳಿಗೆ ಮಂಜೂರಾತಿಯನ್ನು ಪಡೆದುಕೊಳ್ಳಲು ರಾಜ್ಯ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 1994-95ನೇ ಸಾಲಿನಲ್ಲಿ ಕೇಂದ್ರ ಒಪ್ಪಿಗೆಗಾಗಿ ಕಳುಹಿಸಲಾದ ಪ್ರವಾಸೋದ್ಯಮ ಯೋಜನೆಗಳು

1) ಧಾರವಾಡದಲ್ಲಿ ಯಾತ್ರಿ ನಿವಾಸ

2) ಗುಲ್ಬರ್ಗಾದಲ್ಲಿ ಯಾತ್ರಿ ನಿವಾಸ

3) ಬಸವಕಲ್ಯಾಣದಲ್ಲಿ ಪ್ರವಾಸಿ ಸಂಕೀರ್ಣ

4) ಕುದುರೆ ಮುಖದಲ್ಲಿ ಪ್ರವಾಸಿ ಸಂಕೀರ್ಣ

5) ಐಹೊಳೆಯಲ್ಲಿ ಪ್ರವಾಸಿ ಸಂಕೀರ್ಣ

6) ಕಾರವಾರದಲ್ಲಿ ಪ್ರವಾಸಿ ಸಂಕೀರ್ಣ

7) ಪಟ್ಟದ ಕಲ್ಲಿನಲ್ಲಿ ಪ್ರವಾಸಿ ಸಂಕೀರ್ಣ

ಆ) 1994-95ನೇ ಸಾಲಿನಲ್ಲಿ ಕಳುಹಿಸಲಾಗಿತ್ತು. ಮೇಲ್ಕಂಡ ಎಲ್ಲಾ ಯೋಜನೆಗಳಿಗೆ ಮಂಜೂರಾತಿ ನೀಡಿದೆ.

ಇ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಮಂಡಿಸಲಾಯಿತು

ಅಧ್ಯಕ್ಷರು ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ದೂರದರ್ಶನದಲ್ಲಿ ಸದನದ ಕಾರ್ಯಕಲಾಪಗಳ ಪ್ರಸಾರ

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಒಂದಹೊಸ ವಾತಾವರಣವನ್ನು ನೋಡುತ್ತಿದ್ದೇನೆ. ಇಲ್ಲಿಯವರೆಗೆ ಸದನ ಪ್ರಾರಂಭವಾಗುವಂಥ ಸಂದರ್ಭದಲ್ಲಿ ನಮ್ಮ ದೂರದರ್ಶನದವರು ಇಲ್ಲಿ ರೆಕಾರ್ಡ್ ಮಾಡಿಕೊಳ್ಳುತ್ತಿದ್ದರು. ರೆಕಾರ್ಡ್ ಮಾಡುವ ಸಂಧರ್ಭದಲ್ಲಿ ನಾನು ತಿಳಿದುಕೊಂಡೆ, ದೂರದರ್ಶನದವರು ಇರಬಹುದು ಎಂದು ಹೇಳಿ. ಆದರೆ ಪೂರ್ಣ ಕಾರ್ಯಕ್ರಮವನ್ನು ದೂರದರ್ಶನದಲ್ಲಿ ಇವತ್ತು ರೆಕಾರ್ಡ್ ಮಾಡುತ್ತಿರುವಂಥ ಈ ಒಂದು ಪದ್ಧತಿ ನಮ್ಮ ಸದಸ್ಯರಿಗೆ ಗೊತ್ತಿರಲಿಲ್ಲ. ಇದು ಇವತ್ತಿನಿಂದ ಪ್ರಾರಂಭವಾಗದೆ. ಇದು ಪ್ರತಿದಿವಸ ಇರುತ್ತದೋ, ಅಥವಾ ಇವತ್ತಿಗೆ ಮಾತ್ರ ಸೀಮಿತವೋ ಎನ್ನುವುದನ್ನು ದಯವಿಟ್ಟು ಸದನದ ಗಮನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಮ್ಮ ಪ್ರಶ್ನೋತ್ತರ ಅವಧಿಯನ್ನು ನೇರ ಪ್ರಸಾರಕ್ಕೆ ಲೋಕಸಭೆ ತರಹ ವ್ಯವಸ್ಥೆ ಮಾಡಬೇಕೆಂದು ನಾನು, ಮೇಲ್ಮನೆಯ ಸಭಾಪತಿಗಳು ಕೇಂದ್ರ ಸಚಿವರು ಕೇಳಿಕೋಂಡೆವು. ಅವರು ಇನ್ನೂ ಆ ವಿಚಾರದ ಕಡೆಗೆ ಗಮನವನ್ನು ಕೊಡಲಿಲ್ಲ. ಖಾಸಗಿಯವರೊಬ್ಬರು ಬಂದು ನಾವು ಮಾಡುತ್ತೇವೆ ಎಂದು ಹೇಳಿದರ. ನಮ್ಮದು ಎಲ್ಲಾ ತೆಗೆದು ಹೊರಗೆ ಬಹಿರಂಗವಾಗಿ ಇಟ್ಟಿರುವುದರಿಂದ ನಾವು ಮುಚ್ಚಿಡುವಂಥತದ್ದು ಏನೂ ಇಲ್ಲ ಯಾವುದೇ ಮದ್ಯಮದ ಮುಖಾಂತರ ನಮ್ಮ ಕಾರ್ಯಕಲಾಪಗಳು ಜನರಿಗೆ ಪರಿಚಯವಾಗುವುದಾದರೆ ಆಗಲಿ ಎನ್ನುವ ದೃಷ್ಟಿಯಿಂದ ಅನುಮತಿ ಕೊಟ್ಟಿದ್ದೇನೆ. ಅವರು ಇವತ್ತು ಒಂದು ದಿವಸ ಮಾಡುತ್ತೇವೆ ಎಂದು ಹೇಳಿದ್ದಾರೆ. ದಿವಸ ಮಾಡುವುದಾದರೆ ನಮಗೇನೂ ಅಭ್ಯಂತರವಿಲ್ಲ. ಇನ್ನು ಯಾರಾದರೂ